NP – 609

LIBRARY
Acc. No. ............
Date ............

ನಾಲ್ಕನೇ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ಜೂನ್ / ಜುಲೈ 2025
(NEP) (F+R)
ಕನ್ನಡ ಭಾಷಾ ಪತ್ರಿಕೆ – IV
ವ್ಯವಹಾರ ನಿರ್ವಹಣಾ ಕನ್ನಡ – IV

Time : 2½ Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). (2×10=20)

1) 'ನೆಲಸುಗೆ ನಿನ್ನ ವಕ್ಷದೊಳೆ' ಕಾವ್ಯಭಾಗದಲ್ಲಿ ಚಿತ್ರಣಗೊಂಡಿರುವ ಭರತ–ಬಾಹುಬಲಿ ಸಂಘರ್ಷವನ್ನು ವಿವರಿಸಿ.

2) ಕಮಲಾದೇವಿ ಅವರಿಗೆ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರ ಬಗ್ಗೆ ಇದ್ದ ಅಭಿಪ್ರಾಯ ಎಂಥದ್ದು ? ವಿವರಿಸಿ.

3) ನಟರಾಜ್ ಹುಳಿಯಾರ್ ಪ್ರಕಾರ, ನಮ್ಮ ನಿತ್ಯದ ವರ್ತನೆಗಳ ಮೂಲಕ ಸೃಷ್ಟಿಯಾಗುವ ಹಿಂಸೆಗಳಾವುವು ? ಚರ್ಚಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). (4×5=20)

1) ಜನರಲ್ ಸ್ಮಟ್ಸ್‌ಗೆ ಗಾಂಧೀಜಿಯ ಅಹಿಂಸಾ ತತ್ವದ ಅನನ್ಯತೆ ಅರಿವಾದ ಸಂದರ್ಭವನ್ನು ಬರೆಯಿರಿ.

2) ಚೆನ್ನಬಸಪ್ಪನಿಗೆ ನಾಗಮ್ಮನ ಇರುವು ತಿಳಿದ ಬಗೆ ಹೇಗೆ ? ವಿವರಿಸಿ.

3) ಹೈನುಗಾರಿಕೆ ಬಗ್ಗೆ ಲೇಖಕರ ಅಭಿಪ್ರಾಯಗಳನ್ನು ಬರೆಯಿರಿ.

4) ಎಡುಕಾಂಪ ಕಂಪನಿಯ ಹುಟ್ಟು–ಬೆಳವಣಿಗೆಯನ್ನು ವಿವರಿಸಿ.

5) ಷಾಜಿ ಮತ್ತು ಶಿವಾಜಿಯ ನಡುವೆ ಇದ್ದ ಸಂಬಂಧವನ್ನು ಕುರಿತು ಬರೆಯಿರಿ.

6) ಗಾಂಧೀಜಿಯವರಿಂದ ಕಮಲಾದೇವಿಯವರು ಪ್ರಭಾವಿತರಾದ ಬಗೆ ಹೇಗೆ ? ವಿವರಿಸಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ. (1×4=4)

ಬ್ರಿಟಿಷರ ಕ್ರೌರ್ಯವನ್ನು ಕಂಡ ಕಮಲಾದೇವಿಗೆ ಬ್ರಿಟಿಷರ ಮೇಲೆ ತುಂಬಾ ಕ್ರೋಧ ಇತ್ತು. ಬುದ್ಧ ಏಸುವಿನ ತತ್ತ್ವಗಳನ್ನು ಅರ್ಥೈಸಿಕೊಂಡಿದ್ದರೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೇಗೆ ಅಹಿಂಸೆಯನ್ನು ಪಾಲಿಸುವುದೆಂದು ಅವರಿಗೆ ತಿಳಿದಿರಲಿಲ್ಲ. ಆದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮುಖಂಡತ್ವವನ್ನು ಗಾಂಧೀಜಿ ವಹಿಸಿದ ಮೇಲೆ ಕಮಲಾದೇವಿಗೆ ಅಹಿಂಸಾತ್ಮಕ ಚಳುವಳಿಯ ಕುರಿತು ನಂಬಿಕೆ ಬಂತು.

IV. ಬೆಂಗಳೂರು ಗಾರ್ಮೆಂಟ್ಸ್‌ಗೆ ಎಕ್ಸಿಕ್ಯೂಟಿವ್ ಮ್ಯಾನೇಜರ್ ಹುದ್ದೆಗಾಗಿ ಅರ್ಜಿ ಮತ್ತು ಅಭ್ಯರ್ಥನ ಪತ್ರ ಬರೆಯಿರಿ. (1×4=4)

P.T.O.

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (90 ಪದಗಳಿಗೆ ಮೀರದಂತೆ). (1×4=4)

ಸನ್ನಿವೇಶ : ರಸ್ತೆಯಲ್ಲಿ ನೀರು ಪೋಲಾಗುತ್ತಿರುವುದು.

VI. ಕೆಳಕಂಡ ಗದ್ಯಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. (1×4=4)

ಕಾಲೇಜಿನಲ್ಲಿರುವಾಗಲೇ ಗೆಳೆಯನೊಂದಿಗೆ ಸೇರಿ ಕಂಪನಿಯೊಂದನ್ನು ಹುಟ್ಟುಹಾಕಿಯೇ ಬಿಟ್ಟರು ! ಅದರ ಕೆಲಸ ಏನು ಗೊತ್ತಾ ? ರಾಕ್ ಸಂಗೀತದ ಕಚೇರಿಗಳನ್ನು ಆಯೋಜಿಸುವುದು. ಇದರರ್ಥ ರಾಕ್ ಸಂಗೀತದೆಡೆ ಶಂತನುವಿಗೆ ಆಸಕ್ತಿ ಇತ್ತು ಅಂತಲ್ಲ. ಅದೊಂದು ಉತ್ತಮ ಅವಕಾಶವಾಗಿ ಒದಗಿಬಂದಿದ್ದರಿಂದ ಹಾಗೆಯೇ ಬಾಚಿಕೊಂಡಿದ್ದರು. ಆಯೋಜಿಸಿ ಸುಮ್ಮನೇ ಕುಳಿತುಕೊಳ್ಳುತ್ತಿದ್ದರಾ ? ಇಲ್ಲ, ಕಂಪನಿಗಳಿಂದ ಇಲ್ಲ. ಕಂಪನಿಗಳಿಂದ ಪ್ರಾಯೋಜಕತ್ವವನ್ನು ಪಡೆಯುತ್ತಿದ್ದರು. ಹೊಟೇಲುಗಳಲ್ಲಿ ಈ ಇವೆಂಟುಗಳು ಹಾಗೂ ಪ್ರದರ್ಶನಗಳನ್ನು ನಡೆಸುತ್ತಿದ್ದರು. ಟಿಕೆಟ್‌ಗಳನ್ನು ಮಾರುತ್ತಿದ್ದರು. ಹಣವೂ ಅಲ್ಪಸ್ವಲ್ಪವೇನೂ ಸಿಗುತ್ತಿರಲಿಲ್ಲ. ಎಷ್ಟು ಗೊತ್ತಾ ? 4-5 ಲಕ್ಷ ರೂ.ಗಳು. 20 ವರ್ಷಗಳ ಹಿಂದೆ ಇದು ನಿಜಕ್ಕೂ ಅತಿದೊಡ್ಡ ಮೊತ್ತವೇ, ಅಲ್ಲವಾ !!

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (4×1=4)

1) ಶಾಸ್ತ್ರೀಯ ರಾಯಭಾರ ಲೇಖನವನ್ನು ಬರೆದವರು ಯಾರು ?

ಎ) ವೆಂಕಟರಾಮ್ ಬಿ) ವೆಂಕಟಯ್ಯ

ಸಿ) ಸಿ. ಕೆ. ವೆಂಕಟರಾಮಯ್ಯ ಡಿ) ವೆಂಕಟಗಿರಿರಾವ್

2) ಕಮಲಾದೇವಿಯ ತಾಯಿಯ ಹೆಸರೇನು ?

ಎ) ಗಿರಿಜಾ ಬಿ) ಗಿರಿಜಾಬಾಯಿ

ಸಿ) ಅನಿಬೆಸೆಂಟ್ ಡಿ) ರಮಾಬಾಯಿ

3) ಜಾನುವಾರುಗಳ ಬಗ್ಗೆ ಕನ್ನಡದಲ್ಲಿ ದೊರೆತ ಮೊದಲ ಪುಸ್ತಕ ಯಾವುದು ?

ಎ) ಗವಾಶ್ವ ಚಿಕಿತ್ಸಾಶಾಸ್ತ್ರ ಬಿ) ಶಾಲಹೋತ್ರ

ಸಿ) ಗೋವೈದ್ಯ ಡಿ) ಹಸ್ತಾಯುರ್ವೇದ

4) ನಾಗಮ್ಮನ ಪರಿಸ್ಥಿತಿ ಮತ್ತು ಇರುವನ್ನು ಚೆನ್ನಬಸಪ್ಪನಿಗೆ ತಿಳಿಸಿದವರು ಯಾರು ?

ಎ) ಬಿಳಿಯಣ್ಣ ಬಿ) ಮರಿಯಣ್ಣ

ಸಿ) ಸ್ನೇಹಿತರು ಡಿ) ಕರಿಯಣ್ಣ